# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560001

ದೂ:+080-22260017/080-22267470/91-080-22261047

ಮಿಂಚಂಚೆ: info@bsgkarnataka.org / ಅಂತರ್ಜಾಲ: www.bsgkarnataka.org.in


ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/347 /2026-27 ದಿನಾಂಕ: 04.06.2026

ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ
______________________ ಜಿಲ್ಲೆ

ಮಾನ್ಯರೆ,

ವಿಷಯ:– 2025–26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡ 90% ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್, ಮತ್ತು ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳನ್ನು ಗೌರವಿಸುವ ಕುರಿತು.

****

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಉಡುಪಿ ಜಿಲ್ಲಾ ಸಂಸ್ಥೆ ಇವರ ಸಹಯೋಗದೊಂದಿಗೆ 2026ನೇ ಮಾರ್ಚ್ ಮತ್ತು ಏಪ್ರೀಲ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡ 90% ಕ್ಕೂ ಹೆಚ್ಚು ಅಂಕಗಳಿಸಿದ ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳನ್ನು ದಿನಾಂಕ:26.06.2026ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ, ಉಡುಪಿಯ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಜಿಲ್ಲಾ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ, ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ, ಪರ್ಯಾಯ ಶೀರೂರು ಮಠ, ಉಡುಪಿ ಜಿಲ್ಲೆ, ಮತ್ತು ಶ್ರೀಮತಿ ಶಾಂತ ವಿ ಆಚಾರ್ಯ ರವರು, ಮುಂತಾದ ಗಣ್ಯರು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ, ರಾಜ್ಯ ಮುಖ್ಯ ಆಯುಕ್ತರು ಡಾ.ಪಿ.ಜಿ.ಆರ್ ಸಿಂಧ್ಯರವರ ಪ್ರತಿಭಾನ್ವಿತರಿಗೆ ಸನ್ಮಾನಿಸಿ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸುವ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುವುದು.

ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡ 90% ಕ್ಕೂ ಹೆಚ್ಚು ಅಂಕಗಳಿಸಿರುವ ರಾಜ್ಯ ಸಂಸ್ಥೆಯು ನೀಡಿರುವ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಿರುವ ತಮ್ಮ ತಮ್ಮ ಜಿಲ್ಲೆಗಳಲ್ಲಿನ ಸ್ಕೌಟ್ಸ್ –ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳ ಪ್ರತಿಭಾನ್ವಿತರ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಪಟ್ಟಿಯಲ್ಲಿರುವ ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಸಂಪೂರ್ಣ ಸಮವಸ್ತ್ರದೊಂದಿಗೆ ಪ್ರತಿಭಾನ್ವಿತ ಹಾಜರಾಗುವ ನಿಯೋಜಿಸಿ ಕ್ರಮವಹಿಸುವುದು.

..2

ದಿನಾಂಕ:26.06.2026 ರಂದು ಬೆಳಿಗ್ಗೆ 9.00ಕ್ಕೆ, ಶ್ರೀಮತಿ ಸುಮನ್ ಶೇಖರ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು(ಗೈಡ್) ಇವರಲ್ಲಿ ಉಡುಪಿಯ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ವರದಿ ಮಾಡುವುದು, ಅದೇ ದಿನ ಸಂಜೆ 4.00 ಗಂಟೆಗೆ ಕಾರ್ಯಕ್ರಮ ಮುಕ್ತಾಯವಾಗಲಿದೆ.

ಊಟ, ಉಪಹಾರದ ವ್ಯವಸ್ಥೆಯನ್ನು ಉಡುಪಿ ಜಿಲ್ಲಾ ಸಂಸ್ಥೆಯವರು ನಿರ್ವಹಿಸಲಿರುವರು, ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ/ಪಿ.ಯು.ಸಿ ಯ ಅಂಕ ಪಟ್ಟಿಯ ಜೆರಾಕ್ಸ್ ಪ್ರತಿಯನ್ನು ತರುವುದು, ಹಾಗೂ ತಮ್ಮ ಶಾಲೆಯ ಐಡಿ ಕಾರ್ಡ್‌ನೊಂದಿಗೆ ಭಾಗವಹಿಸುವುದು.

ರಾಜ್ಯ ಸಂಸ್ಥೆ ನೀಡಿರುವ ಲಿಂಕ್‌ನಲ್ಲಿ ಪ್ರತಿಭಾನ್ವಿತ ಸ್ಕೌಟ್ಸ್-ಗೈಡ್ಸ್ (ಎಸ್.ಎಸ್.ಎಲ್.ಸಿ) ಮತ್ತು ರೋವರ್ಸ್-ರೇಂಜರ್ಸ್‌ಗಳಲ್ಲಿ (ಪಿ.ಯು.ಸಿ) ವಿವರಗಳನ್ನು ಎಂಟ್ರಿ ಮಾಡಿದ್ದು, ಸದರಿ ಪಟ್ಟಿನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲಾಗಿದೆ. **ತಾವು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳ ಹೆಸರುಗಳನ್ನು ಮತ್ತು ಅಂಕಪಟ್ಟಿಗಳನ್ನು ಪರಿಶೀಲಿಸಿ,** ತಿದ್ದುಪಡಿಗಳು ಇದ್ದಲ್ಲಿ ಕೂಡಲೇ ರಾಜ್ಯ ಸಂಸ್ಥೆಗೆ ಕಳುಹಿಸಲು ಕೋರಲಾಗಿದೆ. ತಾವು ಪರಿಶೀಲಿಸಿ, ತಿಳಿಸಿರುವ ಹೆಸರು & ಅಂಕಗಳನ್ನು ಪ್ರಮಾಣ ಪತ್ರದಲ್ಲಿ ಮುದ್ರಿಸಲಾಗುವುದು. ಆದ್ದರಿಂದ ತಾವು ಸರಿಯಾಗಿ ಪರಿಶೀಲಿಸಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕೋರಲಾಗಿದೆ. ಪಟ್ಟಿಯಲ್ಲಿರುವ ಹೆಸರುಗಳನ್ನು ಮೇಲ್ಕಂಡ ಕಾರ್ಯಕ್ರಮಕ್ಕೆ ಭಾಗವಹಿಸುವ ಬಗ್ಗೆ ಸೂಕ್ತ ಕ್ರಮವಹಿಸಿ, ಸಮವಸ್ತ್ರದಲ್ಲಿ ನಿಯೋಜಿಸಲು ಮತ್ತು ಭಾಗವಹಿಸುವವರ ಹೆಸರುಗಳನ್ನು ದಿನಾಂಕ:20.06.2026ರ ಒಳಗಾಗಿ ರಾಜ್ಯ ಸಂಸ್ಥೆಯ ಈ ಕೆಳಕಂಡವರಿಗೆ ತಪ್ಪದೇ ತಿಳಿಸಲು ಕೋರಿದೆ.

1). ಶ್ರೀ ಎಂ ಪ್ರಭಾಕರ್ ಭಟ್ – SOC (S) – 9448914540

2).ಶ್ರೀಮತಿ ಸಿ ಮಂಜುಳ – SOC (G) – 9844366941

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**(ಕೆ.ಗಂಗಪ್ಪ ಗೌಡ)**
ರಾಜ್ಯ ಕಾರ್ಯದರ್ಶಿ